ಇ) ತಿರುಮಲದಲ್ಲಿ ತಿರುಮಲ-ತಿರುಪತಿ ದೇವಸ್ಥಾನದವರಿಂದ ಗುತ್ತಿಗೆಗೆ ಪಡೆದಿರುವ 7 ಎಕರೆ 05 ಸೆಂಟ್ಸ್ ಸ್ಥಳದಲ್ಲಿ ಪ್ರಸ್ತುತ ಕರ್ನಾಟಕ ಪ್ರವಾಸಿ ಸೌಧದ ಕಟ್ಟಡದಲ್ಲಿ 86 ಕೊಠಡಿಗಳು, ಕರ್ನಾಟಕ ಕಲ್ಯಾಣ ಮಂಟಪದಲ್ಲಿ 8 ಕೊಠಡಿಗಳು ಮತ್ತು 1 ಕಲ್ಯಾಣ ಮಂಟಪವಿದ್ದು, ಈ ಕೊಠಡಿಗಳ ದುರಸ್ತಿ ಕಾಮಗಾರಿಯನ್ನು ರೂ. 40.17 ಲಕ್ಷಗಳ ವೆಚ್ಚದಲ್ಲಿ ಕೈಗೊಳ್ಳಲಾಗುತ್ತಿದೆ. ಹಾಗೂ ರಾಜ್ಯ ಛತ್ರದ ಆವರಣದಲ್ಲಿ ರೂ. 42.10 ಲಕ್ಷಗಳ ವೆಚ್ಚದಲ್ಲಿ ಮೂಲಭೂತ ಸೌಕರ್ಯಗಳ ಕಲ್ಪಿಸುವ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ರಾಜ್ಯ ಛತ್ರದ ಆವರಣದಲ್ಲಿ ಒಟ್ಟು 542 ಕೊಠಡಿಗಳ ವಸತಿ ಸಂಕೀರ್ಣವನ್ನು ನಿರ್ಮಿಸಲು ಉದ್ದೇಶಿಸಿದ್ದು, ಮೊದಲನೇ ಹಂತದಲ್ಲಿ 94 ಕೊಠಡಿಗಳನ್ನು ನಿರ್ಮಿಸುವ ಕಾಮಗಾರಿಯ ಅಂದಾಜು ಪಟ್ಟಿಗೆ ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿದ್ದು ಸದರಿ ಕಾಮಗಾರಿಯನ್ನು ಕೈಗೊಳ್ಳುವ ಸಲುವಾಗಿ ರೂ. 1100.00 ಲಕ್ಷಗಳನ್ನು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಕೋರ ವಿಭಾಗದವರಲ್ಲಿ ಠೇವಣಿ ಇರಿಸಲಾಗಿದೆ.

ಸದರಿ ಕಾಮಗಾರಿಯನ್ನು ಕೈಗೊಳ್ಳಲು ಕಾಮಗಾರಿಯ ಮೂಲ ನಕ್ಷೆಗಳಿಗೆ ತಿರುಮಲ-ತಿರುಪತಿ ದೇವಸ್ಥಾನದವರಿಂದ ಅನುಮೋದನೆಯನ್ನು ನಿರೀಕ್ಷಿಸಲಾಗುತ್ತಿತ್ತು. ಈ ಮಧ್ಯೆ ಆಂಧ್ರಪ್ರದೇಶದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಶ್ರೀ ಟಿ. ನರಸಿಂಹನ್ ಎಂಬುವರು ತಿರುಮಲ ಬೆಟ್ಟದಲ್ಲಿ ಅನ್ಯರಾಜ್ಯ ಹಾಗೂ ಖಾಸಗಿ ವ್ಯಕ್ತಿ / ಸಂಸ್ಥೆಗಳಿಗೆ ವಸತಿಗೃಹವನ್ನು ನಿರ್ಮಿಸಲು ಅನುಮತಿ ನೀಡ ಬಾರದೆಂದು ನಿರ್ದೇಶನವನ್ನು ನೀಡುವಂತೆ ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಸಂಖ್ಯೆ 23801/2010 ನ್ನು ಸಲ್ಲಿಸಿದ್ದು, ಸದರಿ ರಿಟ್ ಅರ್ಜಿಯಲ್ಲಿ ಕರ್ನಾಟಕ ರಾಜ್ಯ ಛತ್ರವನ್ನು ಮೂರನೇ ಪ್ರತಿವಾದಿಯನ್ನಾಗಿ ಮಾಡಿರುತ್ತಾರೆ. ಆಂಧ್ರಪ್ರದೇಶದ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ : 16-11-2010ರಂದು ನೀಡಿರುವ ಮಧ್ಯಂತರ ಆದೇಶದಲ್ಲಿ ಯಥಾ ಸ್ಥಿತಿಯನ್ನು ಕಾಪಾಡಲು ನಿರ್ದೇಶಿಸಿದ್ದು, ಈ ಮಧ್ಯಂತರ ಆದೇಶವನ್ನು ತೆರವುಗೊಳಿಸುವ ಬಗ್ಗೆ ಕರ್ನಾಟಕ ರಾಜ್ಯದಿಂದ